# ನೀನೇ ಅಚ್ಯುತ ನೀನೇ ಮಾಧವ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page No. 29.
2. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 114.
3. **Note:** This song is not available in the books of Prof. S.K. Ramachandra Rao and also in the books of Sri. Pavanje Guru Rao and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1.
5. **Note:** Singer has followed these lyrics.

ರಾಗ: ಮಧ್ಯಮಾವತಿ ತಾಳ: ಆದಿ

ನೀನೇ ಅಚ್ಯುತ ನೀನೇ ಮಾಧವ
ಹರಿ ಗೋವಿಂದನು ನೀನೆ
ನೀನೆ ಗತಿಯೆಂದು ನಂಬಿದ ದಾಸಗೆ
ಅಭಯ ಕೊಟ್ಟಾತನು ನೀನೆ ॥ ಪ ॥

ಜಲದೊಳು ಪೊಕ್ಕು ಮೈ ನಡುಗಿಸಿ ಭಾರವ
ತಳೆದಾತನು ನೀನೆ
ಇಳೆಯ ಕದ್ದಸುರನ ದಾಡೆಯಿಂದ
ಸೀಳಿ ಕಂಬದೊಳು ಉದ್ಭವಿಸಿದೆ ನೀನೆ ॥ 1 ॥

ಬಲಿಯ ಪಾತಾಳಕೆ ತುಳಿದೆಯೊ ನೀನು ಕೊ-
ಡಲಿಯ ಪಿಡಿದವನು ನೀನೆ
ಜಲಧಿಯ ದಾಟಿ ಅಸುರರ ಕಡಿದು
ಲಲನೆಯ ತಂದಾತ ನೀನೆ ॥ 2 ॥

ಗೊಲ್ಲರ ಮನೆಯಲಿ ಬೆಣ್ಣೆಯ ಕದ್ದು

ಕಳ್ಳನೆನಿಸಿದವ ನೀನೆ
ಬಲ್ಲಿದ ತ್ರಿಪುರದಿ ಬತ್ತಲೆ ನಿಂತು
ಒಳ್ಳೆ ಹಯವ ಹತ್ತಿದೆ ನೀನೆ  ॥ 3 ॥

ಪಾಂಡವರಿಗತಿ ಪ್ರಿಯನೆಂದೆನಿಸಿದ
ಪುಂಡರೀಕಾಕ್ಷನು ನೀನೆ
ಪುಂಡಲೀಕ ಪುರುಷೋತ್ತಮ ಮೂರುತಿ
ಪುರಂದರ ವಿಠಲನು ನೀನೆ  ॥ 4 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ದಶಾವತಾರ ಲೀಲೆಗಳನ್ನು ವಿವರಿಸುತ್ತ ನೀನೆ ಎಲ್ಲರಿಗೂ ಗತಿ ಎಂಬುದನ್ನು ದಾಸರು ಇಲ್ಲಿ ಹೇಳಿದ್ದಾರೆ.

೧ **ಜಲದೊಳು ---- ನೀನೆ** = ಮತ್ಸ್ಯಾವತಾರ ಮತ್ತು ಕೂರ್ಮಾವತಾರ

**ಇಳೆಯಚಕ್ರ ---- ನೀಳ** = ವರಹಾವತಾರ

**ಕಂಬದೊಳುದ್ಭವಿಸಿದಿ ---- ನೀನೆ** = ನರಸಿಂಹಾವತಾರ.

೨ **ಬಲಿಯ ---- ನೀನು** = ವಾಮನಾವತಾರ,

**ಕೊಡಲಿಯ ---- ನೀನೆ** = ಪರಶುರಾಮಾವತಾರ,

**ಜಲಧಿಯ ---- ನೀನೆ** = ರಾಮಾವತಾರ.

೩ **ಗೊಲ್ಲರ ---- ನೀನೆ** = ಕೃಷ್ಣಾವತಾರ,

**ಬಲ್ಲಿದ ---- ನಿಂತು** = ಬೌದ್ಧಾವತಾರ

**ಒಳ್ಳೆ ---- ನೀನೆ** = ಕಲ್ಕ್ಯಾವತಾರ.

**ಪುಂಡಲೀಕ = ಪುಂಡರೀಕ** = ಒಬ್ಬ ಬ್ರಾಹ್ಮಣ. ಸಕಲ ಶಾಸ್ತ್ರ ವಿಶಾರದ. ನಾರಾಯಣನ ಸರ್ವೋತ್ತಮತ್ವದ ವಿಷಯವಾಗಿ ನಾರದನ ಕೂಡ ವಾದ ಮಾಡಿದನು. ಇವನು ಅಂಬರೀಷನ ಗೆಳೆಯ. ಅಧರ್ಮಾಚರಣದಿಂದ ಪತಿತನಾಗಿ ಪ್ರಾಯಶ್ಚಿತ್ತ ಹೊಂದಿ, ಮುಂದೆ ಪರಮಾತ್ಮನ ಅಪರೋಕ್ಷ ಜ್ಞಾನದಿಂದ ಮೋಕ್ಷ ಪಡೆದನು. (ಭಾರತ ಅನುಶಾಸನ, ೧೫೩)

**Classification:** Keerthane
**Ankita:** purandara vittala
**Location:** NA
**Category:** Sankeerna, Dashavatara
**Sub-Category:** dashavatara, achyuta, Madhava, govinda, Krishna, bhaya, bhumi, bali, asura, benne, kalla, kudure, pandava,
**Pravachana:** NA
**Explanation:** NA